(32ನೇ ಪುಟದಿಂದ)
ಇದು ತಲೆ ತಲಾಂತರದಿಂದಲೂ ಇವರ ಕುಟುಂಬಗಳ ಕುಲ ಕಸುಬು. ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಕೇಳಿದರೆ 'ಹೊಟ್ಟೆಗೆ ಹಿಟ್ಟಿಲ್ಲ. ಇನ್ನೆಲ್ಲಿಯ ವ್ಯಾಸಂಗ' ಎನ್ನುತ್ತಾರೆ. ಬೇರೆ ಉದ್ಯೋಗ ಮಾಡಬಹುದಲ್ಲ ಎಂದು ಯುವಕರನ್ನು ಕೇಳಿದರೆ ಕಬ್ಬಿಣ ಬಿಟ್ಟರೆ ಬೇರೇನೂ ಗೊತ್ತಿಲ್ಲ ಎನ್ನುತ್ತಾರೆ ತುಕಾರಾಮ್.

ಮಳೆಗಾಲದ ನಾಲ್ಕು ತಿಂಗಳು ಕಳೆಯುವುದು ನಮಗೆ ಯಮ ಯಾತನೆ. ಎಲ್ಲೂ ಕೆಲಸ ಸಿಗಲ್ಲ. ಈ ಎಂಟು ತಿಂಗಳಲ್ಲಿ ದುಡಿದು ಉಳಿಸಿದ್ದರಲ್ಲೇ ಬದುಕಿನ ಬಂಡಿ ಸಾಗಬೇಕು. ವಿಧಿಯಿಲ್ಲದೆ ತವರಲ್ಲೇ ಕಾಲ ಕಳೆಯುತ್ತೇವೆ ಎನ್ನುತ್ತಾರೆ ಕುಟುಂಬವೊಂದರ ಒಡತಿ ಭೂರಿ.

'ಒಂದಿಂಚೂ ನೆಲವಿಲ್ಲ. ಇದ್ದರೂ ಕಬ್ಬಿಣದ ಕಸುಬು ಬಿಟ್ಟರೇ ಬೇರೇನೂ ನಮಗೆ ಗೊತ್ತಿಲ್ಲ. ಸರ್ಕಾರದ ಸವಲತ್ತುಗಳ ಕಿಂಚಿತ್ ಮಾಹಿತಿಯೂ ನಮಗಿಲ್ಲ. ಹೊಟ್ಟೆಪಾಡಿಗಾಗಿ ಊರೂರು ಅಲೆಯುತ್ತೇವೆ. ಕೆಲ ವರ್ಷಗಳಿಂದ ಪ್ರತಿ ವರ್ಷ ಇಲ್ಲಿಗೆ ಬರುತ್ತೇವೆ. ಕಳೆದ ವರ್ಷ ನಾಲ್ಕು ತಿಂಗಳು ಈ ಭಾಗದಲ್ಲೇ ನೆಲೆ ನಿಂತಿದ್ದೆವು. ವಿಜಯಪುರ, ಇಂಡಿ, ಆಲಮೇಲ ಸೇರಿದಂತೆ ಉತ್ತರ ಕರ್ನಾಟಕದ ಬಹುತೇಕ ಕಡೆ ಹೋಗಿ ಕಬ್ಬಿಣದ ಕೆಲಸ ಮಾಡುತ್ತೇವೆ. ಕೊಡಲಿ, ಮಚ್ಚು, ಮಾಂಸ ಕತ್ತರಿಸುವ ಮಚ್ಚು, ಪಿಕಾಸಿ, ಕುಡುಗೋಲು ಸೇರಿದಂತೆ ರೈತಾಪಿ ವರ್ಗದ ಜನರಿಗೆ ಅಗತ್ಯವಿರುವ ಕಬ್ಬಿಣದ ಸಲಕರಣೆ ಮಾಡಿಕೊಡುತ್ತೇವೆ' ಎಂದವರು ಬೀರ್‌ಸಿಂಗ್ ಚೌಹಾಣ್.

'ಒಮ್ಮೆ ನಮ್ಮ ಬಳಿ ಕೊಂಡವರು ಪ್ರತಿ ವರ್ಷವೂ ಹುಡುಕಿಕೊಂಡು ಬರುತ್ತಾರೆ. ಕೆಲವರು ಮತ್ತಷ್ಟು ಹೊಸ ಪರಿಕರ ಕೊಂಡರೆ, ಹಲವರು ಹಳೆಯ ಪರಿಕರಗಳ ದುರಸ್ತಿಗೆ ಬರುತ್ತಾರೆ. ನಮ್ಮ ವ್ಯಾಪಾರದಲ್ಲಿ ಚೌಕಾಶಿಯೇ ಹೆಚ್ಚು. ಊರು ಬಿಡುವಾಗಲೇ ಸಾಕಷ್ಟು ಕಬ್ಬಿಣ, ಇದ್ದಿಲು ಜತೆ ಬರುತ್ತೇವೆ. ಅದೂ ಮುಗಿಯುತ್ತಿದ್ದಂತೆ ಇಲ್ಲೇ ಖರೀದಿಸುತ್ತೇವೆ' ಎಂದು ತಮ್ಮ ಬದುಕಿನ ಚಿತ್ರಣವನ್ನು ಈ ಐದು ಕುಟುಂಬಗಳ ಹಿರಿಯರಾದ ಬೀರ್‌ಸಿಂಗ್ ಚೌಹಾಣ್ ಬಿಚ್ಚಿಟ್ಟರು.

ವಲಸೆ ಕಾರ್ಮಿಕರ ಪುನರ್ವಸತಿಗೆ ಅವರ ಮಕ್ಕಳ ವಿದ್ಯಾಭ್ಯಾಸಕ್ಕೆ ಸರ್ಕಾರದಲ್ಲಿ ನೂರೆಂಟು ಯೋಜನೆಗಳಿವೆ. ಆದರೆ ಹೀಗೆ ಅಂತರ ರಾಜ್ಯ ವಲಸೆ ಹೋಗುವ ಮಂದಿ ಇಲ್ಲಿಯೂ ಸಲ್ಲದೆ, ಅಲ್ಲೂ ಸಲ್ಲದೆ ಬೀದಿಗೆ ಬೀಳುತ್ತಾರೆ. ಮಕ್ಕಳ ಶಿಕ್ಷಣ, ಅವರ ಆರೋಗ್ಯ ಎಲ್ಲವೂ ಇವರಿಗೆ ಮರೀಚಿಕೆಯೇ.



